1986ರಲ್ಲಿ – 723 ವಿದ್ಯಾರ್ಥಿಗಳು
1987ರಲ್ಲಿ – 727 ವಿದ್ಯಾರ್ಥಿಗಳು

ಇ) ಒಟ್ಟು ರೂ. 31.12 ಲಕ್ಷ ಬಾಕಿ ಇದ್ದು ಸಂದಾಯವಾಗಿರುವುದಿಲ್ಲ.

ಈ) ಬಾಕಿ ಇರುವ ಕ್ಲಿನಿಕಲ್ ಮೊತ್ತವನ್ನು ವಸೂಲು ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ರಾಜ್ಯದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸಮುದಾಯ ಆರೋಗ್ಯ ಕೇಂದ್ರಗಳನ್ನಾಗಿ ಪರಿವರ್ತನೆ

2086: ಶ್ರೀ ಮಂಜುನಾಥ. ಸಿ. ಕುನ್ನೂರ (ಶಿಗ್ಗಾಂವ್):–

ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸಮುದಾಯ ಆರೋಗ್ಯ ಕೇಂದ್ರಗಳನ್ನಾಗಿ ಪರಿವರ್ತಿಸಲಾಗಿರುವುದೇ; (ಜಿಲ್ಲಾವಾರು ವಿವರ ನೀಡುವುದು)

ಆ) ಧಾರವಾಡ ಜಿಲ್ಲೆ ಶಿಗ್ಗಾಂವ್ ಸಿ.ಹೆಚ್.ಸಿ. ಸಮುದಾಯ ಆರೋಗ್ಯ ಕೇಂದ್ರದ ಕಟ್ಟಡ ಎಂದು ಪೂರ್ಣಗೊಂಡಿತು;

ಇ) ಸಮುದಾಯ ಆರೋಗ್ಯ ಕೇಂದ್ರದಲ್ಲಿ ನಿಯೋಜಿಸಬೇಕಾಗುವ ವೈದ್ಯರ ಹಾಗೂ ಸಿಬ್ಬಂದಿಯ ಸಂಖ್ಯೆ ಎಷ್ಟು;

ಈ) ಶಿಗ್ಗಾಂವ್ ಸಮುದಾಯ ಕೇಂದ್ರಕ್ಕೆ ಬೇಕಾಗುವ ಸಿಬ್ಬಂದಿಗಳನ್ನು ಕೂಡಲೇ ಒದಗಿಸಲಾಗುವುದೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):–

ಅ) ಹೌದು.

(ಜಿಲ್ಲಾವಾರು ವಿವರಗಳನ್ನು ಲಗತ್ತಿಸಿದೆ)

ಆ) 1988-89ರಲ್ಲಿ ಪೂರ್ಣಗೊಂಡಿದೆ.

ಇ) ನಾರ್ಮ್ಸ್ ಪ್ರಕಾರ ಈ ಕೆಳಗೆ ನಮೂದಿಸಿರುವ ಸಿಬ್ಬಂದಿಯನ್ನು ಸಮುದಾಯ ಆರೋಗ್ಯ ಕೇಂದ್ರಕ್ಕೆ ನಿಯೋಜಿಸಬೇಕಾಗುವುದು.

1. ವೈದ್ಯಾಧಿಕಾರಿಗಳು	– 3
2. ಸಹಾಯಕ ದಂತ ಚಿಕಿತ್ಸಕರು	– 1
3. ಫಾರ್ಮಾಸಿಸ್ಟ್	– 2
4. ಗ್ರೂಪ್ – ಡಿ	– 4
5. ಸಹಾಯಕರು	– 10
6. ಸ್ಟಾಫ್ ನರ್ಸ್	– 3
7. ಧೋಬಿ	– 1
8. ಎ.ಎನ್.ಎಮ್ಸ್	– 2
9. ಕಛೇರಿ ಅಧೀಕ್ಷಕರು	– 1
10. ಪ್ರಥಮ ದರ್ಜೆ ಸಹಾಯಕರು	– 1

11. ದ್ವಿತೀಯ ದರ್ಜೆ ಸಹಾಯಕರು	–3
12. ಕ್ಲರ್ಕ್–ಕಂ–ಟೈಪಿಸ್ಟ್	–1
13. ಕ್ಷ – ಕಿರಣ ತಂತ್ರಜ್ಞ	– 1
14. ಕ್ಷ – ಕಿರಣ ಅಟೆಂಡರ್	– 1
15. ಕಿರಿಯ ಪ್ರಯೋಗ ಶಾಲಾ ತಂತ್ರಜ್ಞ	–1
16. ಕಿರಿಯ ಪ್ರಯೋಗ ಶಾಲಾ ಅಟೆಂಡರ್	1
17. ಅಡಿಗೆಯವರು	1
ಈ) 93-94ನೇ ಸಾಲಿನಲ್ಲಿ ಒದಗಿಸಲಾಗುವುದು.	
ಒಟ್ಟು	37

ರಾಜ್ಯದಲ್ಲಿ ಮಂಜೂರಾಗಿರುವ ಪರಿವರ್ತನೆಯಾಗಿರುವ ಸಮುದಾಯ ಆರೋಗ್ಯ ಕೇಂದ್ರಗಳು (ಜಿಲ್ಲಾವಾರು ವಿವರ)

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಸಮುದಾಯ ಆರೋಗ್ಯ ಕೇಂದ್ರಗಳ ಸಂಖ್ಯೆ
1.	ಬೆಂಗಳೂರು ಗ್ರಾಮಾಂತರ	8
2.	ಬೆಂಗಳೂರು ನಗರ	1
3.	ತುಮಕೂರು	9
4.	ಚಿತ್ರದುರ್ಗ	8
5.	ಶಿವಮೊಗ್ಗ	8
6.	ಕೋಲಾರ	12
7.	ಮೈಸೂರು	12
8.	ಹಾಸನ	14
9.	ಚಿಕ್ಕಮಗಳೂರು	8
10.	ದಕ್ಷಿಣ ಕನ್ನಡ	9
11.	ಕೊಡಗು	8
12.	ಮಂಡ್ಯ	7
13.	ಧಾರವಾಡ	17
14.	ಬೆಳಗಾಂ	11
15.	ಉತ್ತರಕನ್ನಡ	11
16.	ಬಿಜಾಪುರ	15
17.	ಬಳ್ಳಾರಿ	8
18.	ಬೀದರ್	6
19.	ರಾಯಚೂರು	10
20.	ಗುಲ್ಬರ್ಗ	17